ಆನೇಕಲ್ ಕ್ಷೇತ್ರದಲ್ಲಿ ಕೆರೆಗಳ ಒತ್ತುವರಿ.

2256(2749)

ಶ್ರೀ ಬಿ.ನಾರಾಯಣಸ್ವಾಮಿ(ಆನೇಕಲ್): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ಕ್ಷೇತ್ರದಲ್ಲಿ ಕೆರೆಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಒತ್ತುವರಿ ತೆರವುಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಬಂದಿದೆ.

ಆ) ಆನೇಕಲ್ ಕ್ಷೇತ್ರದಲ್ಲಿ ಕೆರೆಗಳ ಒತ್ತುವರಿ ಬಗ್ಗೆ ವಿವರವಾದ ಸರ್ವೇಕ್ಷಣೆ ನಡೆಸಲಾಗಿದ್ದು, ಸಧ್ಯಕ್ಕೆ 6 ಕೆರೆಗಳು ಒತ್ತುವರಿಯಾಗಿರುವುದನ್ನು ಗುರುತಿಸಲಾಗಿದ್ದು, ಈ 6 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆಕಂದಾಯ ಇಲಾಖೆಯನ್ನು ಸಂಪರ್ಕಿಸಿದ್ದು, ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆನೇಕಲ್ ಕ್ಷೇತ್ರದ ಕೈಗಾರಿಕಾ ಕ್ಷೇತ್ರದಲ್ಲಿ ಸ್ಥಾಪಿಸಲ್ಪಟ್ಟಿರುವ ಸಣ್ಣ, ಮಧ್ಯಮ, ಬೃಹತ್ ಕೈಗಾರಿಕೆಗಳ ಕುರಿತು.

2257(3025)

ಶ್ರೀ ನಾರಾಯಣಸ್ವಾಮಿ.ಎ.(ಆನೇಕಲ್): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆನೇಕಲ್ ಕ್ಷೇತ್ರದಲ್ಲಿ ಐದು ಕೈಗಾರಿಕಾ ಕ್ಷೇತ್ರವನ್ನು ಸ್ಥಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟಿರುವ ಸಣ್ಣ, ಮಧ್ಯಮ, ಬೃಹತ್ ಕೈಗಾರಿಕೆಗಳ ಪಟ್ಟಿ ನೀಡುವುದು.

ಇ) ಈ ಕೈಗಾರಿಕೆಗಳಲ್ಲಿ ಲಭ್ಯವಿರುವ ಕೈಗಾರಿಕೆಗಾರರ ಸಂಖ್ಯೆ ಎಷ್ಟು?

ಈ) ಸದರಿ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಲಭ್ಯವಾಗಿರುವ ಉದ್ಯೋಗಾವಕಾಶದ ಸಂಖ್ಯೆ ಎಷ್ಟು?

ಉ) ಸ್ಥಳೀಯರಿಗೆ ಉದ್ಯೋಗಗಳನ್ನು ನಿರಾಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು):

ಅ) ಬಂದಿದೆ.

ಆ) ಪಟ್ಟಿ ಲಗತ್ತಿಸಲಾಗಿದೆ.

ಇ) ಒಟ್ಟು 17,053.

ಈ) ಒಟ್ಟು 14,495.

ಉ) ಬಂದಿರುವುದಿಲ್ಲ.

List of Small Scale, Industry, Large & Medium Industries.

(Revised)

| Sl. No. | Industrial Area | Industries | No.of Units |
|---|---|---|---|
| 1. | Jigani Industrial Area | SSI | 59 |
| 2. | Jigani Industrial Area | Tiny | 47 |
| 3. | Jigani Industrial Area | Large & Medium | 13 |
| 4. | Attibele Indl. Area | SSI | 65 |
| 5. | Attibele Indl. Area | Tiny | 39 |
| 6. | Attibele Indl. Area | Large & Medium | 04 |
| 7. | Bommasandra Indl. Area | SSI | 178 |
| 8. | Bommasandra Indl. Area | Tiny | 53 |
| 9. | Bommansandra Indl. Area | Large & Medium | 26 |
| 10. | Veerasandra Indl. Area | SSI | 182 |
| 11. | Veerasandra Indl. Area | Tiny | 23 |
| 12. | Veerasandra | Large & Medium | 03 |
| | | Total | 612 |